## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.428/2018

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಸದಾಶಿವಪ್ಪ | CW: 1 | PW: 1 |
| ತಂದೆಯ ಹೆಸರು | : | ದುರುಗಪ್ಪ | | |
| ವಯಸ್ಸು | : | 65 | | |
| ವೃತ್ತಿ | : | ಕೂಲಿ | | |
| ವಾಸಸ್ಥಳ | : | ಮಾದನಬಾವಿ | | |

ದಿನಾಂಕಃ 29.08.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 8 ನನ್ನ ಮಗ. ಚಾಸಾ 9 ನನ್ನ ಹೆಂಡತಿ. ಚಾಸಾ 10 ರಿಂದ 13 ರವರು ಗೊತ್ತು. ಈಗ್ಗೆ 7 ವರ್ಷಗಳ ಹಿಂದೆ ನಾನು, ಚಾಸಾ 8 ಮತ್ತು 9 ರವರು ನಮ್ಮ ಮನೆಯಲ್ಲಿದ್ದಾಗ ಆರೋಪಿಗಳು ಒಟ್ಟು 10 ಜನ ನಮ್ಮ ಮನೆಗೆ ಬಂದು ಸೂಳೇಮಗ ಎಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಕಣೆಗೆಯಿಂದ ಹೊಡೆದು ಹಲ್ಲೆ ಮಾಡಿ ಚಾಸಾ 9 ರವರಿಗೆ ಬೈದು, 1 ಮತ್ತು 4 ನೇ ಆರೋಪಿತರು ಚಾಸಾ 9 ರವರ ಸೀರೆಯನ್ನು ಎಳೆದಾಡಿ ಅವಮಾನ ಮಾಡಿರುತ್ತಾರೆ. ನನ್ನ ತಲೆಗೆ ಮತ್ತು ಕೈಗಳಿಗೆ ಕಣೆಗೆಯಿಂದ ಹೊಡೆದು ಹಲ್ಲೆ ಮಾಡಿದರು. ಹಲ್ಲೆಯ ಸಂಬಂಧ ನ್ಯಾಮತಿಯ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ಬಂದು ನನ್ನ ಹೇಳಿಕೆ/ದೂರನ್ನು ಪಡೆದುಕೊಂಡು, ಹೆಬ್ಬೆಟ್ಟು ಹಾಕಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 6 ನೇ ಆರೋಪಿಗಳನ್ನು ನೋಡಿ ಗುರುತಿಸಿದ್ದು ಉಳಿದ ಆರೋಪಿಗಳು ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ

ಎಂದು ತಿಳಿಸಿರುತ್ತಾರೆ. ಸಾಕ್ಷಿಯು ಅರವಿಂದ ಮತ್ತು ಸುದೀಪ ರವರು ಸಹ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿಯು ಹೇಳಿಕೆ/ದೂರನ್ನು ಮತ್ತು ಅದರಲ್ಲಿನ ತನ್ನ ಹೆಬ್ಬೆಟ್ಟನ್ನು ನೋಡಿ ಗುರುತಿಸಿದ್ದು ಹೇಳಿಕೆ/ದೂರನ್ನು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ನೀಲಗಿರಿ ಕೋಲನ್ನು ಮತ್ತು ಕಣೆಗೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

1 ನೇ ಆರೋಪಿಯು ಮು.ಮಾ 1 ರಿಂದ ನನ್ನ ಬೆನ್ನಿಗೆ ಮತ್ತು ಎಡಕಿವಿಗೆ ಹೊಡೆದು ಗಾಯಪಡಿಸಿರುತ್ತಾನೆ ಎಂದರೆ ಸರಿ. ಆರೋಪಿಗಳೆಲ್ಲರುಾ ಕೈಕಾಲುಗಳಿಂದ ನನ್ನ ಮೈಕೈಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿ. ಜಗಳ ಬಿಡಿಸಲು ಬಂದ ಚಾಸಾ 8 ರವರನ್ನು ಆರೋಪಿಗಳು ಕೆಳಗೆ ಬೀಳಿಸಿ ಕೈಕಾಲುಗಳಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. 3 ನೇ ಆರೋಪಿಯು ಮು.ಮಾ 2 ರಿಂದ ಚಾಸಾ 8 ರವರ ಮೇಲೆ ಹಲ್ಲೆ ಮಾಡಿ ಗಾಯಪಡಿಸಿರುತ್ತಾನೆ ಎಂದರೆ ಸರಿ. 1 ಮತ್ತು 4 ನೇ ಆರೋಪಿತರು ಕೈಗಳಿಂದ ಜಗಳ ಬಿಡಿಸಲು ಬಂದ ಚಾಸಾ 9 ರವರ ಕಪಾಳಕ್ಕೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿ. ಚಾಸಾ 10, 12 ಮತ್ತು 13 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಹಲ್ಲೆಯ ಹಿನ್ನೆಲೆಯಲ್ಲಿ ಚಾಸಾ 8 ಮತ್ತು 9 ರವರು ಸಹ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿರುತ್ತಾರೆ ಎಂದರೆ ಸರಿ. ಈ ಸಂಬಂಧ ನಾನು ಪೋಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯ ಒಪ್ಪದ ಮರುಹೇಳಿಕೆಯನ್ನು ನಿಪಿ 2 ಎಂದು ಗುರುತಿಸಲಾಯಿತು. ಆರೋಪಿಗಳೆಲ್ಲರೂ ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಜಿ ಪಿ ಎಂ ವಕೀಲರಿಂದಃ-

ನಮ್ಮದು ಯಾವ ಊರು ಎಂದರೆ ಮೂಲತಃ ನಳ್ಳಿನಕೊಪ್ಪ ಆದರೆ 35 ವರ್ಷಗಳಿಂದ ಮಾದನಬಾವಿಯಲ್ಲಿ ವಾಸವಿರುತ್ತೇನೆ. ಆರೋಪಿಗಳು ಮಾದನಬಾವಿ ಗ್ರಾಮಸ್ಥರು ಎಂದರೆ ಸರಿ. ನನ್ನ ಮತ್ತು ಆರೋಪಿಗಳ ಮನೆ ಅಕ್ಕ-ಪಕ್ಕ ಇದೆ ಎಂದರೆ ಸಾಕ್ಷಿಯು ಬೇರೆ ಬೇರೆ ಕೇರಿಗಳಲ್ಲಿ

ಇರುತ್ತವೆ ಸುಮಾರು 50 ಅಡಿ ದೂರ ಆಗುತ್ತದೆ ಎಂದು ನುಡಿಯುತ್ತಾರೆ. ಆರೋಪಿಗಳು ಯಾವ ದಿನಾಂಕದಂದು ನಮ್ಮ ಮನೆಯ ಹತ್ತಿರ ಬಂದಿರುತ್ತಾರೆ ಎಂದರೆ ದಿನಾಂಕ ನೆನಪಿಲ್ಲ ಆದರೆ ಸಂಜೆ 7 ಗಂಟೆ ಸಮಯದಲ್ಲಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗಳು ಯಾವ ವಾಹನದಲ್ಲಿ ಬಂದಿರುತ್ತಾರೆ ಎಂದರೆ ಓಮಿನಿ ವಾಹನ ಎಂದು ನುಡಿಯುತ್ತಾರೆ. ಸದರಿ ವಾಹನದ ನೋಂದಣಿ ಸಂಖ್ಯೆ ಮತ್ತು ಬಣ್ಣ ಯಾವುದು ಎಂದರೆ ನೆನಪಿಲ್ಲ. ಆರೋಪಿಗಳು ಯಾವ ಕಾರಣಕ್ಕೆ ನಮ್ಮ ಮನೆಯ ಹತ್ತಿರ ಬಂದಿರುತ್ತಾರೆ ಎಂದರೆ ಗೊತ್ತಿಲ್ಲ. ನಮ್ಮ ಮನೆಯ ಅಕ್ಕ-ಪಕ್ಕ ಗ್ರಾಮಸ್ಥರ ಮನೆಗಳು ಇದ್ದಾವೆ ಎಂದರೆ ಸರಿ. ನನ್ನ ಮನೆಯ ಅಕ್ಕ ಪಕ್ಕದವರ ಜೊತೆ ನಾನು ವಿಶ್ವಾಸದಿಂದ ಇದ್ದೇನೆ ಎಂದರೆ ಸರಿ. ಓಮಿನಿ ವಾಹನದಿಂದ ಯಾರು ಮೊದಲು ಇಳಿದಿರುತ್ತಾರೆ ಎಂದರೆ ಸಾಕ್ಷಿ 1 ಮತ್ತು 4 ನೇ ಆರೋಪಿತರು ಎಂದು ನುಡಿಯುತ್ತಾರೆ. ಆರೋಪಿಗಳು ನಮ್ಮ ಮನೆಯ ಹತ್ತಿರ ಬಂದು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.